ಈ) ಹಾಗಿದ್ದಲ್ಲಿ ಎಂದಿನಿಂದ ಮುಂಬಡ್ತಿ ನೀಡಲಾಗುವುದು?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಇ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ನೀಡುವ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಈ) 'ಇ' ಯಲ್ಲಿ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ

ನ್ಯಾಯಾಲಯಗಳ ತೀರ್ಪುಗಳ ಉಲ್ಲಂಘನೆ

1527 (1720) ಶ್ರೀ ಗುರುಸ್ವಾಮಿ .ಎ.ಎಸ್ (ಚಾಮುಂಡೇಶ್ವರಿ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ 3757ರಿಂದ 3768: 1998 ತೀರ್ಪಿನಂತೆ ಮತ್ತು ನೇಮಕಾತಿ ನಿಯಮಾವಳಿಯ ಪ್ರಕಾರ ಪ್ರಾಂಶುಪಾಲರು ಮತ್ತು ವಿಭಾಗಾಧಿಕಾರಿಗಳ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲಾಗಿದೆಯೇ?

ಆ) ಹಾಗಿದ್ದಲ್ಲಿ ತುಂಬಲಾದ ಬ್ಯಾಕ್‌ಲಾಗ್ ಹುದ್ದೆಗಳೆಷ್ಟು?

ಇ) ಹಾಗಿಲ್ಲದಿದ್ದಲ್ಲಿ ಇದು ನ್ಯಾಯಾಲಯದ ನಿಂದನೆಯಾಗುವುದಿಲ್ಲವೇ?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಇಲ್ಲ, ಪಾಲಿಟೆಕ್ನಿಕ್‌ನ ಬೋಧಕ ಸಿಬ್ಬಂದಿಯವರಿಗೆ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಿರುವ ಆದೇಶದಲ್ಲಿ ಪ್ರಾಂಶುಪಾಲರ ಹಾಗೂ ವಿಭಾಗಾಧಿಕಾರಿಗಳ ಪ್ರತ್ಯೇಕ ಕೇಡರ್ ಇರುವುದಿಲ್ಲ. ಪ್ರತಿಯೊಂದು ಪಾಲಿಟೆಕ್ನಿಕ್‌ನಲ್ಲಿ ಜೇಷ್ಠತೆಯಲ್ಲಿ ಹಿರಿಯರಾದವರು ಪ್ರಾಂಶುಪಾಲರಾಗಿ ಹಾಗೂ ಪ್ರತಿಯೊಂದು ವಿಭಾಗದಲ್ಲಿ ಜೇಷ್ಠತೆಯಲ್ಲಿ ಹಿರಿಯರಾದವರು ವಿಭಾಗಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಹುದ್ದೆಗಳನ್ನು ಮುಂಬಡ್ತಿಯಿಂದ ತುಂಬಿರುವುದಿಲ್ಲ.

ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು ಇಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

1528 (1781) ಶ್ರೀ ಗುರಸ್ವಾಮಿ .ಎ.ಎಸ್ (ಚಾಮುಂಡೇಶ್ವರಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ, ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು ಇಲ್ಲ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿವಿಧ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿವಿಧ ವಿದ್ಯಾರ್ಥಿವೇತನಗಳು ಅಂದರೆ, ಡಿ.ಎಸ್.ಡಬ್ಲ್ಯೂ, ಡಿ.ಬಿ.ಸಿ.ಎಂ., ಡಿ.ಸಿ.ಇ, ಡಿ.ಟಿ.ಇ. ಇತರೆ ಇವುಗಳನ್ನು ವಿತರಣೆ ಮಾಡಲಾಗಿದೆಯೇ?

ಆ) ಇಲ್ಲವಾದ್ದಲ್ಲಿ ಯಾವಾಗಿನಿಂದ ಬಾಕಿ ಉಳಿದಿರುತ್ತವೆ ಹಾಗೂ ಕಾರಣ

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) : ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕೆಳಕಂಡ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

1. ರಕ್ಷಣಾದಳದ ಸಿಬ್ಬಂದಿಯವರ ಮಕ್ಕಳು/ ಅವಲಂಬಿತರಿಗೆ ವಿದ್ಯಾರ್ಥಿ ವೇತನ

2. ಸರ್ಕಾರಿ ಸೇವೆಯಲ್ಲಿ ಸೇವೆ ಮಾಡುತ್ತಿದ್ದಾಗ ಮರಣ ಹೊಂದಿದ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ವಿಶೇಷ ವಿದ್ಯಾರ್ಥಿ ವೇತನ.

3. ಸಾಮಾನ್ಯ ವಿದ್ಯಾರ್ಥಿ ವೇತನ.

4. ಬಿ.ಎಂ.ಎಸ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು ಇಲ್ಲ ಮೇಲ್ಕಂಡ ವಿದ್ಯಾರ್ಥಿವೇತನಗಳು ಯಾವುದು ಬಾಕಿ ಇರುವುದಿಲ್ಲ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮೊತ್ತವು ಕಳೆದ ಮೂರು ವರ್ಷಗಳಿಂದ ಸಾಕಷ್ಟು ಅನುದಾನದ ಕೊರತೆಯಿಂದ ಮರುಪಾವತಿ ಮಾಡಲು ಬಾಕಿ ಇದೆ.

ಆ) ಸ್ಕಾಲರ್‌ಶಿಪ್ ಬಾಕಿ ಇರುವುದಿಲ್ಲ. ಆದರೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ ಮೊತ್ತವು ಅನುದಾನದ ಕೊರತೆಯಿಂದಾಗಿ ಬಾಕಿ ಇದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಹುದ್ದೆಗಳ ಭರ್ತಿ

1529 (1782) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಆ ಪೈಕಿ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಎಂದಿನಿಂದ ಸದರಿ ಹುದ್ದೆಗಳನ್ನು ಖಾಲಿ ಇಡಲಾಗಿದೆ;

ಈ) ಯಾವಾಗ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು;

ಉ) ಮೆಕ್ಯಾನಿಕಲ್ ಪ್ರಾಧ್ಯಾಪಕರನ್ನು ವಿಶೇಷವಾಗಿ ಒಳಗೊಂಡು ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದಕ್ಕೆ ಕಾರಣಗಳೇನು?